# 149 ಕೊರೊನಾ ಶಾಕ್


## ತಿಂಗಳ ಸೋಂಕು ಒಂದೇ ದಿನ ಪತ್ತೆ । ಕಳೆದ ಮೂರು ದಿನಗಳಲ್ಲಿ 303 ಪ್ರಕರಣ

## ಮಂಡ್ಯದಲ್ಲಿ ಮಂಗಳವಾರವೇ 71 ಕೇಸ್ । ಹೆಚ್ಚುತ್ತಲೇ ಇದೆ ಸೋಂಕಿತರ ಸಂಖ್ಯೆ

**ಬೆಂಗಳೂರು:** ರಾಜ್ಯಕ್ಕೆ ಮಂಗಳವಾರ ಕೊರೊನಾ ಭಾರೀ ಶಾಕ್ ನೀಡಿದ್ದು, 149 ಕೇಸ್‌ಗಳು ಪತ್ತೆಯಾಗಿವೆ. ರಾಜ್ಯಕ್ಕೆ ಕೊರೊನಾ ವೈರಸ್ ಸೋಂಕು ಪ್ರವೇಶಿಸಿ ಮೊದಲ ತಿಂಗಳಲ್ಲಿ ದಾಖಲಾದ ಸೋಂಕು ಪ್ರಕರಣಗಳ ಸಂಖ್ಯೆ ಮಂಗಳವಾರ ಒಂದೇ ದಿನ ಕಾಣಿಸಿಕೊಂಡಿವೆ. ಕಳೆದ ಮೂರು ದಿನಗಳಲ್ಲಿ 303 ಪ್ರಕರಣಗಳು ದೃಢಪಟ್ಟಿದ್ದು, ಈ ಪೈಕಿ 227 ಪ್ರಕರಣಗಳು ಹೊರರಾಜ್ಯದಿಂದಲೇ ಬಂದ ಸೋಂಕಿತರದಾಗಿದೆ. ಮಂಡ್ಯದಲ್ಲಿ ಒಂದೇ ದಿನ 71 ಸೋಂಕು ದೃಢವಾಗಿರುವುದು ಆತಂಕಕ್ಕೆ ಕಾರಣವಾಗಿದೆ.

ಇಲ್ಲಿಯುವರೆಗೂ ರಾಜ್ಯದಲ್ಲಿ ದೆಹಲಿ ಮತ್ತು ಅಹಮದಾಬಾದ್ ತಬ್ಲೀಘಿ ಜಮಾತ್‌ಗೆ ತೆರಳಿದ್ದವರಲ್ಲಿ 175 ಸೋಂಕು ಪ್ರಕರಣಗಳಿದ್ದರೆ, ಮಹಾರಾಷ್ಟ್ರದಿಂದ ಬಂದ ವಲಸಿಗರ ಸೋಂಕು ಪ್ರಕರಣಗಳು 250 ದಾಟಿವೆ. ರಾಜ್ಯಕ್ಕೆ ಮೊದಲು ವಿದೇಶಿಗರ ಸೋಂಕು ಪ್ರಕರಣಗಳು, ಆ ಬಳಿಕ ತಬ್ಲೀಘಿ ಜಮಾತ್ ಸದಸ್ಯರ ಸೋಂಕು ಪ್ರಕರಣಗಳು, ಮೈಸೂರಿನ ನಂಜನಗೂಡು ಔಷಧ ತಯಾರಿಕ ಕಾರ್ಖಾನೆ ಸೋಂಕು ಪ್ರಕರಣಗಳು, ಅಜ್ಮೇರ್ ಪ್ರವಾಸಿಗರ ಸೋಂಕು ಪ್ರಕರಣಗಳು ತಲೆ ನೋವಾಗಿದ್ದವು. ಆದರೆ ಈಗ ಹೊರರಾಜ್ಯದಿಂದ ಬರುತ್ತಿರುವ ವಲಸೆ ಕಾರ್ಮಿಕರ ಪ್ರಕರಣಗಳು ಆತಂಕ ಮೂಡಿಸಿವೆ. ಇನ್ನು ಹೊರರಾಜ್ಯದಿಂದ ಬಂದು ಸೋಂಕು ಪತ್ತೆಯಾದ ವಲಸೆ ಕಾರ್ಮಿಕರ ಪೈಕಿ ಶೇ.90 ಮಂದಿ ಮಹಾರಾಷ್ಟ್ರ ಅದರಲ್ಲೂ ಮುಂಬೈನಿಂದ ಬಂದವರೇ ಆಗಿದ್ದಾರೆ.

ಮಂಗಳವಾರದ ಕೇಸ್‌ಗಳಲ್ಲಿ 113 ಮಂದಿ ಹೊರರಾಜ್ಯ ಪ್ರಯಾಣ ಹಿನ್ನೆಲೆ ಹೊಂದಿದ್ದವರು. ಈ ಮೂಲಕ ಸೋಂಕು ಪ್ರಕರಣಗಳ ಸಂಖ್ಯೆ 1395ಕ್ಕೆ ಏರಿಕೆಯಾಗಿದೆ. ಸಾವಿನ ಸಂಖ್ಯೆಯೂ 40ಕ್ಕೆ ಏರಿಕೆಯಾಗಿದೆ.



ಅಮೃತಸರದಲ್ಲಿ ವಲಸೆ ಕಾರ್ಮಿಕರು ಸಾಮಾಜಿಕ ಅಂತರ ನಿಯಮ ಉಲ್ಲಂಘಿಸಿ ವೈದ್ಯಕೀಯ ಪರೀಕ್ಷೆಗೆ ನಿಂತಿರುವುದು.

### ಸಾವಿನ ಸಂಖ್ಯೆ 40ಕ್ಕೆ ಏರಿಕೆ

ಬಳ್ಳಾರಿ, ವಿಜಯಪುರ, ಬೆಂಗಳೂರು ನಗರದಲ್ಲಿ ತಲಾ ಒಬ್ಬ ಪುರುಷ ಸೋಂಕಿತರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವುದು ವರದಿಯಾಗಿದೆ. ಈ ಎಲ್ಲ ಸೋಂಕಿತರು ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು. ಮಂಗಳವಾರ ರಾಜ್ಯದಲ್ಲಿ ಸೋಂಕಿಗೆ ಬಲಿಯಾದವರ ಸಂಖ್ಯೆ 40ಕ್ಕೆ ತಲುಪಿದೆ.

### ಲಾಕ್ ಡೌನ್ ವಿನಾಯ್ತಿ, ಭದ್ರತಾ ಲೋಪವೇ ಕಾರಣ

ಏಪ್ರಿಲ್ ಕೊನೆಯ ವಾರದವರೆಗೂ ರಾಜ್ಯದಲ್ಲಿ ಸೋಂಕು ನಿಯಂತ್ರಣದಲ್ಲಿತ್ತು. ಮೇ ತಿಂಗಳಿಂದೀಚೆಗೆ ನೀಡಿದ ಲಾಕ್ ಡೌನ್ ವಿನಾಯ್ತಿ ಬಳಿಕ ಹೊರರಾಜ್ಯದಿಂದ ಬರುವವರ ಸಂಖ್ಯೆ ಹೆಚ್ಚಾಯಿತು. ಏಪ್ರಿಲ್ ಅಂತ್ಯಕ್ಕೆ 565 ಇದ್ದ ಸೋಂಕು ಪ್ರಕರಣಗಳು 19 ದಿನಗಳಲ್ಲಿ 1,395ಕ್ಕೆ ಏರಿಕೆಯಾಗಿದೆ. ಹೊರರಾಜ್ಯದಿಂದ ಬಂದವರ ಪೈಕಿ ಶೇ.30ರಷ್ಟು ಗಡಿ ಭದ್ರತಾ ವ್ಯವಸ್ಥೆ ಕಣ್ತಪ್ಪಿಸಿ ಬಂದಿದ್ದರೆ, ಉಳಿದವರು ಪಾಸ್ ನೊಂದಿಗೆ ಬಂದಿದ್ದಾರೆ.

### ಚಿಕ್ಕಮಗಳೂರಿಗೂ ಆಘಾತ

ಕೊರೊನಾ ವೈರಸ್ ಸೋಂಕು ಪ್ರಕರಣಗಳಿಲ್ಲದೆ ನಿಶ್ಚಿಂತವಾಗಿದ್ದ ಚಿಕ್ಕಮಗಳೂರು (5 ಪ್ರಕರಣ) ಜಿಲ್ಲೆಗೆ ಹೊರ ರಾಜ್ಯದಿಂದ ಬಂದ ವಲಸೆ ಕಾರ್ಮಿಕರಿಂದ ಸೋಂಕು ಪ್ರವೇಶಿಸಿದೆ. ಕಳೆದ ಒಂದು ವಾರದಲ್ಲಿ ಹಾವೇರಿ, ಹಾಸನ, ರಾಯಚೂರು, ಕೊಪ್ಪಳ ಜಿಲ್ಲೆಗಳಿಗೆ ಕೊರೊನಾ ಪ್ರವೇಶಿಸಿದೆ. ಹಸಿವನ್ನು ನೀಗಿಸಿಕೊಳ್ಳಲು ಮುಂಬೈಗೆ ತೆರಳಿದ್ದ ಸ್ಥಳೀಯರು ಹಿಂದಿರುಗಿದ್ದು, ಇವರನ್ನು ಜಿಲ್ಲಾ ಗಡಿಯಲ್ಲಿಯೇ ತಡೆದು ಕ್ವಾರಂಟೈನ್ ಮಾಡಿ ಪರೀಕ್ಷೆ ನಡೆಸಿದಾಗ ಸೋಂಕು ತಗುಲಿರುವುದು ಪತ್ತೆಯಾಗಿದೆ.

## ಮಂಡ್ಯಕ್ಕೆ ಮುಂಬೈ ಆಘಾತ

■ ಮಂಡ್ಯ ಮಂಜುನಾಥ್

119 ... 13 ... 18 ... 17 ... 71

**ಮಂಡ್ಯ:** ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಕೊರೊನಾ ಸೋಂಕಿತರ ಸಂಖ್ಯೆ ಮೂರಂಕಿ ದಾಟಿದ್ದು, ಇದರಲ್ಲಿ 71 ಪ್ರಕರಣಗಳು ಮಂಡ್ಯದಲ್ಲೇ ಕಾಣಿಸಿಕೊಂಡಿವೆ. ಸಕ್ರಿಯ ಪ್ರಕರಣಗಳ ಲೆಕ್ಕಾಚಾರದಲ್ಲಿ ಮಂಡ್ಯ ಜಿಲ್ಲೆ ಮೊದಲ ಸ್ಥಾನಕ್ಕೇರಿದೆ. ಇಲ್ಲಿ 139 ಪ್ರಕರಣಗಳಿದ್ದರೆ, ಬೆಂಗಳೂರಿನಲ್ಲಿ 114 ಸಕ್ರಿಯ ಕೇಸ್‌ಗಳಿವೆ. ದಾವಣಗೆರೆ 3ನೇ ಸ್ಥಾನದಲ್ಲಿದ್ದು, 104 ಪ್ರಕರಣಗಳಿವೆ. ಮೇ 15ರಿಂದ ಆರಂಭಗೊಂಡು ಇಲ್ಲಿವರೆಗೆ ಒಟ್ಟಾರೆ 119 ಪ್ರಕರಣಗಳು ಮುಂಬೈ ಮೂಲದಿಂದ ಕಾಣಿಸಿಕೊಂಡಿವೆ. ಅದರಲ್ಲೂ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿಗೆ ಈ ಮುಂಬೈ ನಂಟು ಬಹಳಷ್ಟು ಕಾಡುತ್ತಿದೆ. ಈ ತಾಲೂಕೊಂದರಲ್ಲೇ ಈವರೆಗೆ 96 ಸೋಂಕು ಪ್ರಕರಣಗಳು ದೃಢಪಟ್ಟಿವೆ. ಮೇ 3ರಿಂದ ಈವರೆಗೆ 997 ಜನರು ಕೆ.ಆರ್.ಪೇಟೆಗೆ ಆಗಮಿಸಿದ್ದು, ಇನ್ನೂ 4 ಸಾವಿರಕ್ಕೂ ಹೆಚ್ಚು ಜನರು ಮುಂಬೈನಿಂದ ಆಗಮಿಸುವ ನಿರೀಕ್ಷೆ ಇದೆ ಎಂದು ಖಚಿತ ಮೂಲಗಳು ತಿಳಿಸಿವೆ.

▶ 6ನೇ ಪುಟಕ್ಕೆ

- ಮೇ 15ರಿಂದ ಈಚೆಗೆ ಗಣನೀಯ ಏರಿಕೆ
- ಒಟ್ಟು 119 ಪ್ರಕರಣಗಳಿಗೆ ಮುಂಬೈ ನಂಟು
- ಕೆ.ಆರ್. ಪೇಟೆ ತಾಲೂಕೊಂದರಲ್ಲೇ 96 ಪ್ರಕರಣ

ಮಹಾರಾಷ್ಟ್ರ ಸರ್ಕಾರ ಯಾವುದೇ ಸ್ಕ್ರೀನಿಂಗ್ ಮಾಡದೆ ಜನರನ್ನು ನೇರವಾಗಿ ಕಳುಹಿಸುತ್ತಿರುವುದೇ ಸೋಂಕಿತರು ಹೆಚ್ಚಾಗಲು ಕಾರಣವಾಗಿದೆ.

■ ಡಾ.ಎಂ.ವಿ.ವೆಂಕಟೇಶ್, ಮಂಡ್ಯ ಜಿಲ್ಲಾಧಿಕಾರಿ

### ಕೆ.ಆರ್.ಪೇಟೆಯಲ್ಲಿ ಸೋಂಕು ಆರಂಭ ಹೇಗೆ..?

ಲಾಕ್‌ಡೌನ್ ವೇಳೆ ಮುಂಬೈನಿಂದ ಸರ್ಕಾರಿ ಆಂಬ್ಯುಲೆನ್ಸ್‌ನಲ್ಲಿ ಶವದೊಂದಿಗೆ ಬಂದ ನಾಲ್ವರಲ್ಲಿ ಸೋಂಕು ಕಾಣಿಸಿಕೊಳ್ಳುವುದರೊಂದಿಗೆ ಕೆ.ಆರ್.ಪೇಟೆಗೆ ನಂಜು ಆವರಿಸಲಾರಂಭಿಸಿತು. ಕಾರಿನಲ್ಲಿ ಬಂದಿದ್ದ ಗರ್ಭಿಣಿ, ಯುವತಿಯಲ್ಲೂ ಸೋಂಕು ದೃಢಪಟ್ಟಿತ್ತು. ಮರುವನಹಳ್ಳಿಗೆ ಬಂದಿದ್ದ ವ್ಯಕ್ತಿಯಲ್ಲೂ ಸೋಂಕು ಕಾಣಿಸಿಕೊಂಡು ಆತನಿಂದ ನಾಲ್ವರಿಗೆ ಕೊರೊನಾ ಹರಡಿತ್ತು. ಮೇ 3ರ ಲಾಕ್‌ಡೌನ್ ತೆರವಾದ ಬಳಿಕ ಹರಿದುಬಂದ ವಲಸಿಗರು ಸೋಂಕಿತರ ಸಂಖ್ಯೆಯನ್ನು 96ರ ಗಡಿಗೆ ಮುಟ್ಟಿಸಿದ್ದಾರೆ.

ಪತ್ರಿಕಾ ತುಣುಕುಗಳು
PAPER CLIPPINGS
ವಿಭಾಗ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 20/5/20

# ಮಂಡ್ಯಕ್ಕೆ ಮುಂಬೈ ಆಘಾತ

**1ನೇ ಪುಟದಿಂದ ▸** ಹೊರ ಜಿಲ್ಲೆಗಳಲ್ಲಿರುವ ಜನರು ತವರೂರಿಗೆ ತೆರಳಲು ರಾಜ್ಯಸರ್ಕಾರ ಮುಕ್ತ ಅವಕಾಶ ಮಾಡಿಕೊಟ್ಟಿರುವುದು ಸೋಂಕು ಹರಡುವುದಕ್ಕೆ ಬಹು ಮುಖ್ಯ ಕಾರಣವಾಗಿದೆ. ಮುಂಬೈನಿಂದ ಕಾರು, ಬಸ್, ಟಿಟಿ ಸೇರಿದಂತೆ ಇನ್ನಿತರ ವಾಹನಗಳ ಮೂಲಕ ಬರುತ್ತಿರುವವರನ್ನು ಚೆಕ್‌ಪೋಸ್ಟ್‌ಗಳಲ್ಲೇ ತಡೆಹಿಡಿದು ಕ್ವಾರಂಟೈನ್ ಮಾಡಲಾಗುತ್ತಿದೆ. ಅವರನ್ನು ನಂತರ ತಪಾಸಣೆಗೊಳಪಡಿಸಲಾಗುತ್ತಿದ್ದು ಮುಂಬೈನಿಂದ ಅಂಟಿಸಿಕೊಂಡು ಬಂದ ಕೊರೊನಾ ಸೋಂಕು ಇಲ್ಲಿ ಸ್ಫೋಟಗೊಳ್ಳಲಾರಂಭಿಸಿದೆ.

ಉದ್ಯೋಗವನ್ನು ಅರಸಿ ಮುಂಬೈಗೆ ವಲಸೆ ಹೋದವರ ಪೈಕಿ ಜಿಲ್ಲೆಯ ಕೆ.ಆರ್.ಪೇಟೆ ಹಾಗೂ ನಾಗಮಂಗಲ ತಾಲೂಕಿನವರು ಅತ್ಯಧಿಕ ಸಂಖ್ಯೆಯಲ್ಲಿದ್ದಾರೆ. ಸುಮಾರು 5 ಸಾವಿರಕ್ಕೂ ಹೆಚ್ಚು ಜನರು ವಲಸೆ ಹೋಗಿದ್ದು ಮಹಾನಗರಿಯಲ್ಲಿ ಉಂಟಾಗಿರುವ ಕ್ಲಿಷ್ಟಪರಿಸ್ಥಿತಿಯಿಂದ ಅಲ್ಲಿರಲಾಗದೆ ಎಲ್ಲರೂ ತಾವಿರುವ ಸ್ಥಳವನ್ನು ತೊರೆದು ಬರುತ್ತಿದ್ದಾರೆ.

**ಕಳ್ಳಮಾರ್ಗದಲ್ಲಿ 400 ಜನರು ಆಗಮನ:** ಲಾಕ್‌ಡೌನ್ ಆಗುವುದಕ್ಕೆ ಮುಂಚೆ ಹಾಗೂ ಆದ ನಂತರದ ಸಮಯದಲ್ಲಿ ಸುಮಾರು 400ಕ್ಕೂ ಹೆಚ್ಚು ಮಂದಿ ಕಳ್ಳ ಮಾರ್ಗಗಳ ಮೂಲಕ ಕೆ.ಆರ್.ಪೇಟೆ ತಾಲೂಕಿನ ಸ್ವಗ್ರಾಮಗಳನ್ನು ಸೇರಿಕೊಂಡಿದ್ದಾರೆ. ಅವರೆಲ್ಲರನ್ನೂ ಹುಡುಕಿ ತಪಾಸಣೆಗೊಳಪಡಿಸಲಾಗಿದೆ. ಈಗ ಕಳ್ಳ ಮಾರ್ಗದಲ್ಲಿ ಆಗಮಿಸುವುದಕ್ಕೆ ಅವಕಾಶವೇ ಸಿಗದಂತೆ ಎಲ್ಲೆಡೆ ಚೆಕ್‌ಪೋಸ್ಟ್‌ಗಳನ್ನು ಬಿಗಿಗೊಳಿಸಲಾಗಿದೆ. ಒಮ್ಮೆ ಪೊಲೀಸರ ಕಣ್ತಪ್ಪಿಸಿ ಬಂದರೂ ಊರಿನವರು ಪೊಲೀಸರು ಮತ್ತು ಆರೋಗ್ಯ ಇಲಾಖೆಯವರಿಗೆ ಮಾಹಿತಿ ನೀಡುತ್ತಿರುವುದರಿಂದ ಸೋಂಕು ಸಮುದಾಯಕ್ಕೆ ಹರಡುವುದನ್ನು ತಪ್ಪಿಸಲು ಸಾಧ್ಯವಾಗಿದೆ ಎಂದು ಕೆ.ಆರ್.ಪೇಟೆ ತಾಲೂಕು ಆಡಳಿತ ತಿಳಿಸಿದೆ.

**ಜಿಲ್ಲಾಡಳಿತ ಅಸಹಾಯಕತೆ:** ಸರ್ಕಾರದ ನಿರ್ದೇಶನದಂತೆ ಅನುಮತಿ ಪಡೆದು ಬರುತ್ತಿರುವ ವಲಸಿಗರನ್ನು ಜಿಲ್ಲೆಯನ್ನು ಪ್ರವೇಶಿಸಲು ಅನುಮತಿ ನಿರಾಕರಿಸುವಂತಿಲ್ಲ. ಸಮುದಾಯಕ್ಕೆ ಹರಡುವುದನ್ನು ತಪ್ಪಿಸುವ ದೃಷ್ಟಿಯಿಂದ ಅಂತಹವರನ್ನು ತಪಾಸಣೆಗೊಳಪಡಿಸುವುದು ಅಗತ್ಯ ಮತ್ತು ಅನಿವಾರ್ಯವಾಗಿದೆ. ಆ ಸಮಯದಲ್ಲಿ ಕೊರೊನಾ ಸೋಂಕು ಪ್ರಕರಣಗಳು ಸ್ಫೋಟಗೊಳ್ಳುತ್ತಿರುವುದು ಸಹಜವಾಗಿದ್ದರೂ, ಸೋಂಕಿತರು ಹಾಗೂ ಕ್ವಾರಂಟೈನ್ ಆದವರಿಗೆ ಅಷ್ಟೇ ಸಮರ್ಥವಾಗಿ ಚಿಕಿತ್ಸೆ ವಸತಿ ಸೌಲಭ್ಯ ಹಾಗೂ ಊಟದ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ ಸಮರ್ಥವಾಗಿ ಎದುರಿಸುತ್ತಿದೆ. ಅದೃಷ್ಟವಶಾತ್ ಸೋಂಕಿತರಲ್ಲಿ ಇದುವರೆಗೂ ಯಾರೊಬ್ಬರೂ ಸಾವನ್ನಪ್ಪದಿರುವುದು ಸಮಾಧಾನದ ನಿಟ್ಟುಸಿರು ಬಿಡುವಂತೆ ಮಾಡಿದೆ.

**400 ಜನರಿಗೆ ನಿರಾಕರಣೆ:** ಮಹಾರಾಷ್ಟ್ರ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ನಾಗಾಲ್ಯಾಂಡ್, ಅಂಡಮಾನ್ ಸೇರಿದಂತೆ ವಿವಿಧೆಡೆಯಿಂದ ತವರಿಗೆ ಮರಳುವುದಕ್ಕೆ ಒಟ್ಟು 3,800 ಮಂದಿ ಅರ್ಜಿ ಸಲ್ಲಿಸಿದ್ದು ಈವರೆಗೆ 1,500 ಮಂದಿಗೆ ಅನುಮತಿ ನೀಡಲಾಗಿದೆ. ದಾಖಲಾತಿಗಳನ್ನು ಸಮರ್ಪಕವಾಗಿ ಒದಗಿಸದಿರುವ 400 ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

**ಪೂರ್ವ ಸಿದ್ಧತೆ:** ಈಗಾಗಲೇ ಮಂಡ್ಯ ಜಿಲ್ಲಾ ಆಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗಿದೆ. ಒಟ್ಟು 151 ಸೋಂಕಿತರಲ್ಲಿ 21 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಇನ್ನೂ 130 ಮಂದಿ ಆಸ್ಪತ್ರೆಯಲ್ಲಿದ್ದಾರೆ. 350 ಹಾಸಿಗೆ ಸಾಮರ್ಥ್ಯವುಳ್ಳ ಜಿಲ್ಲಾಸ್ಪತ್ರೆಯಲ್ಲಿ 220 ಮಂದಿಯನ್ನು ದಾಖಲಿಸಲು ಅವಕಾಶವಿದೆ.

ಜಿಲ್ಲಾಸ್ಪತ್ರೆ ಭರ್ತಿಯಾದಲ್ಲಿ ಒಕ್ಕಲಿಗರ ಭವನ, ಸ್ಯಾಂಜೋ ಆಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯಾಗಿ ಪರಿವರ್ತಿಸುವುದಕ್ಕೆ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.